## ಮಯೂರ ವಿಶೇಷ



ಎನ್.ಎಸ್. ಗುಂಡೂರ್

## ಕನ್ನಡ ವಿದ್ವತ್ ಪರಂಪರೆಯ ಸಂಪತ್ತು

# ಡಿ.ಆರ್. ನಾಗರಾಜರ ಬೌದ್ಧಿಕ ಜೀವನಚರಿತ್ರೆ

**ಬಣ್ಣದ ವೇಷ ಅಟ್ಟವನೇರಿ, ಕೇಕೆ ಹಾಕಿ ಬಿರುದಾವಳಿ ಕೊಚ್ಚಿಕೊಂಡು ಕುಣಿಯುತ್ತ ಆಟ ಕಳೆಗಟ್ಟುತ್ತಿರುವಾಗಲೇ ಕರಂಟಾರಿ ಹೋಯಿತಲ್ಲಯ್ಯ!**

(‘ಡಿ.ಆರ್. ನಾಗರಾಜ್’, ಚಂದ್ರಶೇಖರ ಕಂಬಾರ)

ಡಿ.ಆರ್. ನಾಗರಾಜರ ಬರಹಗಳು ಕನ್ನಡಕ್ಕೆ ಅವರು ಬಿಟ್ಟುಹೋದ ಅನನ್ಯ ಬಳುವಳಿ (ಲೆಗಸಿ) ಎಂಬುದು ಎಷ್ಟು ನಿಜವೋ, ಆ ಬರಹಗಳ ಸೃಷ್ಟಿಗೆ ಕಾರಣವಾದ ನಾಗರಾಜರ ಬೌದ್ಧಿಕ ಜೀವನ ಸಹ ಕನ್ನಡದ ಸಂಪತ್ತು ಎಂಬುದೂ ಅಷ್ಟೇ ನಿಜ.

ಅಂದರೆ, ನಲವತ್ನಾಲ್ಕು ವರ್ಷಗಳ ತಮ್ಮ ಕಿರು ಅವಧಿಯಲ್ಲಿ ನಾಗರಾಜ್ ಅಂತರರಾಷ್ಟ್ರೀಯ ಮನ್ನಣೆಯ ಚಿಂತಕರಾಗಿ ಬೆಳೆದದ್ದು ಒಂದು ಪವಾಡಕ್ಕೆ ಕಡಿಮೆಯೇನಲ್ಲ. ಆ ಅವಧಿಯಲ್ಲಿ ನಾಗರಾಜರ ವ್ಯಕ್ತಿತ್ವ ಹಾದುಹೋದ ಬೌದ್ಧಿಕ ಪಲ್ಲಟಗಳು, ಗಳಿಸಿಕೊಂಡ ಲೋಕಗ್ರಹಿಕೆ ಮತ್ತು ರೂಪಿಸಿಕೊಂಡ ವಿಶಿಷ್ಟ ಅಧ್ಯಯನ ಕ್ರಮಗಳು ನಾಡಿನ ಬುಧಜನರನ್ನು ಇಂದಿಗೂ ಬೆರಗುಗೊಳಿಸುವಂತಹವು. ಅವರ ಈ ಕ್ಷಿಪ್ರ ಬೌದ್ಧಿಕಯಾನವನ್ನು ಕಂಡು ಆಧುನಿಕ ಭಾರತದ ಮಹತ್ವದ ಚಿಂತಕರಲ್ಲೊಬ್ಬರಾದ ಆಶೀಶ್ ನಂದಿಯವರು ಪೃಥ್ವಿದತ್ತ ಚಂದ್ರಶೋಭಿ ಅವರ ಮುಂದೆ ‘ನಾಗರಾಜ್ ಮಾಡಿದ ಸಾಧನೆ ಮಾಡಲು ಬೇರೆಯವರಿಗೆ ಹಲವಾರು ಜೀವಮಾನಗಳು ಬೇಕಾಗುತ್ತವೆ’ ಎಂದು ಅಚ್ಚರಿಯಿಂದ ಉದ್ಗರಿಸಿದ್ದರಂತೆ.

ಅತಿ ಕಡಿಮೆ ವಯಸ್ಸಿನಲ್ಲಿ ಈ ಮಟ್ಟಿಗಿನ ಬೌದ್ಧಿಕ ಎತ್ತರಗಳನ್ನು ಏರಿದ ವಿರಳ ವ್ಯಕ್ತಿಗಳಲ್ಲಿ ನೆನಪಿಗೆ ಬರುವ ಮತ್ತೊಂದು ಹೆಸರು ಇಟಲಿಯ ಚಿಂತಕ ಆಂಟೋನಿಯೋ ಗ್ರಾಮ್ಸಿ (1891–1937) ಅವರದ್ದು. ಸಾಮಾನ್ಯವಾಗಿ ನಲವತ್ತರ ವಯಸ್ಸಿನ ಆರಂಭ ಎನ್ನುವುದು ವಿದ್ವಾಂಸರ ಚಿಂತನೆ ಪರಿಪಕ್ವತೆ ಪಡೆಯಲು ಪ್ರಾರಂಭಿಸುವ ಕಾಲ; ಇನ್ನೂ ಉತ್ತಮವಾದದ್ದು ಮುಂದೆ ಬರಲಿದೆ ಎಂಬ ನಿರೀಕ್ಷೆ ಅಲ್ಲಿ ಇರುತ್ತದೆ. ಆದರೆ ಗ್ರಾಮ್ಸಿ ಹಾಗೂ ನಾಗರಾಜ್ ಅವರು ಆ ವಯಸ್ಸಿನಲ್ಲೇ ತಮ್ಮ ಬೌದ್ಧಿಕ ಜೀವನದ ಶ್ರೇಷ್ಠತೆಯನ್ನು ಸಾಧಿಸಿ, ಅದಕ್ಕಾಗಿ ಶ್ರಮಿಸಿದ್ದರು.